ಮುಂದೆ ಒಂದು ಸಣ್ಣ ಹಳ್ಳ. ತಿಳಿಯಾದ ನೀರು. ಕೆಲವರು ಫೋಟೊ ತೆಗೆಯುತ್ತಾ, ಕೆಲವರು ನೀರಲ್ಲಿ ಅಡ್ಡಾಡುತ್ತಾ ಇರಬೇಕಾದರೆ ದಡದಲ್ಲಿದ್ದ ನನ್ನ ಕಣ್ಣು ಅರಳಿದವು. ಯಾವುದೋ ಪ್ರಾಣಿಯ ಹೆಜ್ಜೆಗುರುತು. ಹಸಿ ಮರಳಿನಲ್ಲಿ ಸ್ಪಷ್ಟವಾಗಿ ಮೂಡಿದ್ದವು. ಎಲ್ಲರನ್ನೂ ಕೂಗಿದೆ. ಕೆಲವರು ಮೊಬೈಲಿನಲ್ಲಿ ಗೂಗಲಿಸಿ, 'ಇದು ಚಿರತೆಯ ಹೆಜ್ಜೆ ಗುರುತು' ಎಂದರು. ರೋಮಾಂಚನವಾಯಿತು.

ಮುಂದೆ ಸಿಕ್ಕಿದ್ದು. ಡೇರಿಯಾ ಹಳ್ಳಿ. ಕುಣುಬಿ ಜನಾಂಗದ ಹಿರಿಯರೊಬ್ಬರು ಎಷ್ಟೋ ವರ್ಷಗಳ ಹಿಂದೆ ಗೋವಾದಿಂದ ಇಲ್ಲಿ ಬಂದು ಡೇರೆ ಹಾಕಿಕೊಂಡಿದ್ದರಂತೆ. ಆಡುವವರ ಬಾಯಲ್ಲಿ ಸವೆದೂ ಸವೆದೂ ಅದು ಡೇರಿಯಾ ಆಗಿದೆ. ಹಳ್ಳಿಯ ಪಕ್ಕದ ಇಳಿಜಾರನ್ನು ಮೆಟ್ಟಿಲುಗಳಂತೆ ಮಟ್ಟ ಮಾಡಿ ಭತ್ತ ಹಾಕಿದ್ದರು. ನೋಡಿದೇಟಿಗೆ ಉತ್ತರಾಖಂಡವನ್ನೋ, ಹಿಮಾಚಲ ಪ್ರದೇಶವನ್ನೋ ಕಂಡಂತಾಯಿತು. ವಿವಿಧ ಜಾತಿಯ ಭತ್ತಗಳು, ಅವುಗಳ ಬಣ್ಣ ವೈವಿಧ್ಯ, ಅದರಾಚೆಗಿನ ಹಸುರು ಗುಡ್ಡ, ಅದರ ನಡುವೆ ಮೂರ್ನಾಲ್ಕು ಹೆಂಚಿನ ಮನೆಗಳು ಕಣ್ಣಿಗೆ ಹಬ್ಬ ತಂದವು. ಕುಣಬಿ ಜನಾಂಗದವರಲ್ಲಿ ಪಿಎಚ್. ಡಿ. ಪಡೆದಿರುವ ಮೊದಲ ವ್ಯಕ್ತಿ ಜಯಾನಂದ್ ಇದೇ ಹಳ್ಳಿಯವರು. ಇವರ ತಾತನವರೇ ಗೋವಾದಿಂದ ಬಂದು ಇಲ್ಲಿ ಡೇರೆ ಹಾಕಿದ್ದು. ಅಲ್ಲಿನ ಪುಟ್ಟ ಪ್ರಾಥಮಿಕ ಶಾಲೆಗೆ ಹೋಗಿ ಮಕ್ಕಳನ್ನು ಮಾತನಾಡಿಸಿದೆವು. ಪ್ರತಿಯೊಂದು ಮಗುವೂ ನಮ್ಮೆಲ್ಲರನ್ನೂ ಕೈಕುಲುಕಿ ನಮಸ್ಕಾರ ಹೇಳಿ ಸ್ವಾಗತಿಸಿದವು. ಸಮಾಯಾಭಾವದಿಂದ ಇಲ್ಲಿ ಹೆಚ್ಚು ಹೊತ್ತು ಕಳೆಯಲಾಗಲಿಲ್ಲ. ಕುಣುಬಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂಬ ಚರ್ಚೆ ತೀವ್ರವಾಗಿ ನಡೆಯುತ್ತಿದೆಯಂತೆ. ಇದರ ಸೂಚನೆ ತಿಳಿದು ಕುಣಿಬಿಯರ ಜಮೀನುಗಳನ್ನು ಕೊಳ್ಳಲು ರೆಸಾರ್ಟ್ ಮಾಡುವವರು ಮುಗಿಬೀಳುತ್ತಿದ್ದಾರೆ ಎಂದು ಹೆಗಡೆಯವರು ಹೇಳಿದರು. ಒಂದು ವೇಳೆ ಅವರು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಯಾದರೆ ಆಗ ಜಮೀನು ಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬುದೇ ಇದಕ್ಕೆ ಕಾರಣ. ಇದು ಇನ್ನೊಂದು ರೀತಿಯ ಸಾಮಾಜಿಕ ಸಮಸ್ಯೆ ತಂದೊಡ್ಡಬಹುದೇನೋ.

ಹೀಗೆ ಇಡೀ ದಿನ ಸ್ವಚ್ಛವಾಗಿ ಹರಿಯುವ ಕಾಳಿ ಹಾಗೂ ಅದರ ಉಪನದಿಗಳನ್ನು ನೋಡುತ್ತಾ ಖುಷಿಯಿಂದ ಕಳೆದುಹೋಯಿತು. ಆದರೆ ಮಾರನೆ ದಿನ ಆ ಖುಷಿಯೆಲ್ಲಾ ಇಂಗಿಹೋಗುವಂತಹ ದಾರುಣ ಚಿತ್ರಗಳನ್ನು ನೋಡುತ್ತೇವೆ ಅಂದುಕೊಂಡಿರಲಿಲ್ಲ.

ಬೆಳಿಗ್ಗೆ ಎದ್ದು ಕಾಳಿ ನದಿ ದಂಡೆ ಜೋಯಿಡಾ ತಾಲ್ಲೂಕಿನಲ್ಲಿ ಯಥೇಚ್ಛವಾಗಿರುವ ಮಂಗಟ್ಟೆ ಹಕ್ಕಿಗಳನ್ನು ನೋಡಿಕೊಂಡು ದಾಂಡೇಲಿ ತಲುಪಿದೆವು. ಪಟ್ಟಣ ಪ್ರವೇಶಿಸುತ್ತಿದ್ದಂತೆ ಕೆಟ್ಟ ವಾಸನೆ ಮೂಗಿಗಡರಿತು. ಅಲ್ಲಿರುವ ಪೇಪರ್ ಮಿಲ್ಲಿನ ಅವಾಂತರ ಅದು. ದಾಂಡೇಲಪ್ಪನ ದೇವಸ್ಥಾನದ ಬಳಿ ಒಬ್ಬ ರೈತರ ತೋಟ ದಾಟಿದರೆ ವಿಶಾಲವಾಗಿ ಹರಿಯುವ ಕಾಳಿ ನದಿ. ಪಟ್ಟಣದ ಕಡೆಯಿಂದ ಹಾಲ್ಮಾಡಿ ಹೊಳೆ ಬಂದು ಅಲ್ಲಿ ಕಾಳಿಯನ್ನು ಸೇರುತ್ತದೆ. ನೋಡಿದರೆ, ಆ ಹೊಳೆಯ ನೀರು ಕಪ್ಪಗೆ ಕೊಳಕು ತುಂಬಿತ್ತು. ನೀರೊಳಗಿಂದ ಗುಳ್ಳೆಗಳು ಏಳುತ್ತಿದ್ದವು. ಕೆಟ್ಟ ವಾಸನೆ. ನಾವು ಹೋದಾಗ ಹೆಚ್ಚು ಮಳೆಯಿಂದ ಪ್ರವಾಹ ಬಂದು ಕಾಳಿ ನದಿಯ ನೀರು ಮಣ್ಣು ಮಿಶ್ರಣವಾಗಿ ಕೆಂಪಗೆ ಹರಿಯುತ್ತಿತ್ತು. ಹಾಗಿದ್ದರೂ ಹೊಳೆಯ ಕಪ್ಪು ನೀರನ್ನು ಸ್ಪಷ್ಟವಾಗಿ ಗುರುತಿಸಬಹುದಿತ್ತು.

ಕಾಳಿ–ಹಾಲ್ಮಾಡಿ ಎರಡೂ ಕೂಡಿದ ಮೇಲೂ ಫರ್ಲಾಂಗು ದೂರದ ವರೆಗೆ ಆ ನೀರಿನ ವ್ಯತ್ಯಾಸ ಗುರುತಿಸಬಹುದು. ಕಾಳಿ ನೀರು ತಿಳಿಯಾಗಿ ಹರಿಯುವಾಗ ಈ ವ್ಯತ್ಯಾಸ ಇನ್ನಷ್ಟು ಸ್ಪಷ್ಟವಾಗಿರುತ್ತದೆ. 'ಒಳ್ಳೆಯ ನೀರಿನಲ್ಲಿ ಇರುವ ಮೀನುಗಳು ಈ ಕೊಳಕು ನೀರು ತಾಕಿದ ತಕ್ಷಣ ಹಾರಿ ಬೀಳುತ್ತಾ ಒದ್ದಾಡುತ್ತಿರುತ್ತವೆ' ಎನ್ನುತ್ತಾರೆ ಅಲ್ಲಿನ ಸುತ್ತಮುತ್ತಲ ರೈತರು. 'ನೀವೇಕೆ ಇದರ ವಿರುದ್ಧ ನ್ಯಾಯ ಕೇಳಬಾರದು?' ಎಂದು ಆ ರೈತರನ್ನು ಪ್ರಶ್ನಿಸಿದೆವು. 'ನನ್ನ ಮಗ ಅಲ್ಲೇ ಕೆಲಸ ಮಾಡುತ್ತಾನೆ, ನಮಗೆ ಪೇಪರ್ ಮಿಲ್ಲಿನವರು ಒಂದು ಕೊಳವೆಬಾವಿ ಹಾಕಿಸಿಕೊಟ್ಟಿದ್ದಾರೆ' ಎಂದರು.

ಪೇಪರ್ ಮಿಲ್ ಮಾಡುತ್ತಿರುವ ಈ ಮಾಲಿನ್ಯದ ವಿರುದ್ಧ ಎರಡು ದಶಕಗಳಿಂದಲೂ ಹೋರಾಟ ನಡೆಯುತ್ತಿದೆ. ಆದರೆ ಪ್ರಯೋಜನವಾಗಿಲ್ಲ. 2003ರಲ್ಲೇ ಪಾಂಡುರಂಗ ಹೆಗಡೆಯವರು ಹಾಗೂ ಇತರ ಪರಿಸರ ಪ್ರೇಮಿಗಳು ಪಾದಯಾತ್ರೆ ಮೂಲಕ ಗಮನಸೆಳೆದಿದ್ದರು. ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗಿದ್ದವು. ಯಾವುದೂ ಪ್ರಯೋಜನವಾಗಿಲ್ಲ.

ಈ 20 ವರ್ಷಗಳಲ್ಲಿ ಕಾರ್ಖಾನೆಗಳ ತ್ಯಾಜ್ಯ ನೀರನ್ನು ಶುದ್ಧೀಕರಿಸುವ ಸುಧಾರಿತ ತಂತ್ರಜ್ಞಾನ ಬಂದಿವೆ. ಕೆಲವೇ ಲಕ್ಷ ಖರ್ಚು ಮಾಡಿದರೂ ಸಾಕು, ಕೊಳಚೆ ನೀರನ್ನು ನದಿಗೆ ಬಿಡುವುದನ್ನು ಪೂರ್ತಿ ನಿಲ್ಲಿಸಬಹುದು. ಕೋಟ್ಯಂತರ ರೂಪಾಯಿ ಲಾಭ ಗಳಿಸುವ ಕಾರ್ಖಾನೆಗೆ ಇದು ಯಾಕೆ ಸಾಧ್ಯವಾಗಿಲ್ಲ, ನದಿಯಲ್ಲಿರುವ ಜಲಚರಗಳು, ನದಿ ದಡದಲ್ಲಿ ವಾಸಿಸುವ ಜನರ ಬಗ್ಗೆ ಯಾಕೆ ಯೋಚಿಸುತ್ತಿಲ್ಲ. ಕಾರ್ಖಾನೆ ಮಾಲೀಕರ ಮನಸ್ಸಾಕ್ಷಿಗಾದರೂ ಇದು ಹೇಗೆ ಒಪ್ಪುತ್ತದೆ ಎಂದೆನ್ನಿಸಿತು. ಜನರ ಒಳಿತಿಗೇ ಇರುವ ಸ್ಥಳೀಯ ಗ್ರಾಮ ಪಂಚಾಯ್ತಿ, ನಗರಸಭೆ, ಜಿಲ್ಲಾಡಳಿತ, ರಾಜ್ಯ ಸರ್ಕಾರ ಇದನ್ನು ತಡೆಯಲು ಸಾಧ್ಯವಿಲ್ಲವೇ. ಈ ಎಲ್ಲಾ ಹಂತಗಳಲ್ಲೂ ಕಾರ್ಖಾನೆ ಪ್ರಭಾವ ಬೀರಿದೆಯೇ? ಎಲ್ಲವೂ ಒಗಟಾಗಿತ್ತು.

ಅಲ್ಲಿಂದ ಹೊರಟು ಅಂಬಿಕಾ ನಗರ, ಗಣೇಶಗುಡಿ, ಸೂಪಾ ಅಣೆಕಟ್ಟು ಸುತ್ತಾಡಿದೆವು. ಸುತ್ತಾಟದಲ್ಲೊಂದು ದೃಶ್ಯ ಗಮನಸೆಳೆಯಿತು. ಯಾವ ರಸ್ತೆ ತಿರುವು ಅಥವಾ ಸರ್ಕಲ್ಲಿನಲ್ಲಿ ನೋಡಿದರೂ ಹತ್ತಾರು ರೆಸಾರ್ಟುಗಳ ನಾಮಫಲಕಗಳು. ಹಾರ್ನಬಿಲ್, ಫ್ಲೈ ಕ್ಯಾಚರ್, ಬೈಸನ್, ವಿಶಲ್ ವುಡ್ಸ್ ಇತ್ಯಾದಿ ಬಗೆಬಗೆಯ ಹೆಸರುಗಳು. ಇಲ್ಲಿನ ಕಾಡು, ಮಂಗಟ್ಟೆ ಹಕ್ಕಿಗಳು, ಹುಲಿ ಸಫಾರಿ, ಕಾಳಿ ನದಿಯ ರಿವರ್ ರ್‍ಯಾಫ್ಟಿಂಗ್ ಇತ್ಯಾದಿಗಳ ಆಕರ್ಷಣೆಗಳನ್ನು ಅವಲಂಬಿಸಿ ಪ್ರವಾಸೋದ್ಯಮ ಬೆಳೆದಿದೆ. ಈ ಚಟುವಟಿಕೆಗಳು ಇಲ್ಲಿನ ನೂರಾರು ಯುವಕರಿಗೆ ಉದ್ಯೋಗ ಕೊಟ್ಟಿವೆ ಎಂಬುದೂ ನಿಜ. ಆದರೆ ಇದೆಲ್ಲಾ ಎಲ್ಲಿಗೆ ಹೋಗಿ ಮುಟ್ಟುತ್ತದೆಯೋ ತಿಳಿಯದು. ವಯನಾಡು, ಕೊಡಗುಗಳಂತೆ ದಾಂಡೇಲಿ–ಜೋಯಿಡಾ ಸಹ ಪ್ರವಾಸಿಗರು, ಅವರ ಭಾರೀ ವಾಹನಗಳು, ರಸ್ತೆ ಅಗಲೀಕರಣಗಳು, ರೆಸಾರ್ಟುಗಳು, ಹೋಮ್ ಸ್ಟೇಗಳು, ಕೊಳವೆಬಾವಿಗಳೇ ಮುಂತಾದ ಭಾರಕ್ಕೆ ಕುಸಿಯುವುದಿಲ್ಲವೇ ಎಂಬ ಪ್ರಶ್ನೆ ಎದುರಾಯಿತು.

ಇದು ಹುಲಿ ಸಂರಕ್ಷಿತ ಪ್ರದೇಶವಾದ್ದರಿಂದ, 'ಹಾಗಾಗದು ಎಂಬ ಭರವಸೆ ಇದೆ' ಎಂದರು ಹೆಗಡೆಯವರು. ಹುಲಿಗಳ ಮೇಲೆ ನಂಬಿಕೆ ಇಟ್ಟು ಆಶಾವಾದಿಗಳಾಗೋಣ. ■

ಹದಿನೆಂಟೇ ಕಿ.ಮೀ. ಹರಿಯುವ ಕಾಳಿ ಉತ್ತರ ಕನ್ನಡ ಜಿಲ್ಲೆಯ ಡಿಗ್ಗಿ ಎಂಬಲ್ಲಿ ಹುಟ್ಟಿ ಅದೇ ಜಿಲ್ಲೆಯ ಕಾರವಾರದಲ್ಲಿ ಸಮುದ್ರ ಸೇರುತ್ತದೆ. 184 ಕಿಲೋಮೀಟರ್ ಉದ್ದವಿರುವ ಅದು ಈಗ ಸಹಜವಾಗಿ ಹರಿಯುತ್ತಿರುವುದು 18 ಕಿಲೋ ಮೀಟರ್ ಮಾತ್ರ. ಹುಟ್ಟಿದ ಸ್ಥಳದಿಂದ 10 ಕಿಲೋ ಮೀಟರ್ ಹರಿಯುವಷ್ಟರಲ್ಲಿ ಸೂಪಾ ಅಣೆಕಟ್ಟೆಯ ಹಿನ್ನೀರು ಆರಂಭ. ಆನಂತರ ಸತತ ಆರು ಅಣೆಕಟ್ಟುಗಳಲ್ಲಿ ಕಾಳಿ ಬಂಧಿ. ಕೊನೆಯ ಅಣೆಕಟ್ಟಾದ ಕದ್ರಾದಿಂದ 8 ಕಿ.ಮೀ. ಹರಿಯುವಷ್ಟರಲ್ಲಿ ಅರಬ್ಬಿ ಸಮುದ್ರ ಸಿಕ್ಕುತ್ತದೆ. 1400 ಮೆಗಾವ್ಯಾಟ್ ವಿದ್ಯುತ್ ಕೊಡುತ್ತದೆ. ಫಂಡರಿ, ತಟ್ಟಿಹಳ್ಳ, ನಾಗಿ, ಕಾನೇರಿ ಹಾಗೂ ವಾಕಿ ಉಪನದಿಗಳು.


ಈ ಮೋಹಕ ನಿಸರ್ಗಕ್ಕೆ ಮನುಷ್ಯನ ಹಸ್ತಕ್ಷೇಪದ್ದೇ ಆತಂಕ